# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ. ನಂ.6/2019

ಅ.ಸಾ : **1**

ದೋ.ಸಾ : **1**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಲಿಂಗೇಶ ಮಾದರ |
| ತಂದೆಯ ಹೆಸರು | : | ದುರುಗಪ್ಪ |
| ವಯಸ್ಸು | : | **23** ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ ಸ್ಥಳ | : | ಭೂವೀರಾಪುರ, ಹಾವೇರಿ. |

ದಿನಾಂಕ: **22/12/2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ-ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದ: –**

1. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇರುವುದಿಲ್ಲ. ನನ್ನ ತಂದೆಯವರ ಹೆಸರಿನಲ್ಲಿರುವ ಜಮೀನನ್ನು, ಅವರು ತೀರಿಕೊಂಡ ನಂತರ, ವಾರಸಾ ಮಾಡಿಸುವ ಸಲುವಾಗಿ ಮಾಹಿತಿ ಪಡೆಯಲು ತಹಶೀಲ್ದಾರ ಕಛೇರಿಗೆ ಹೋಗಿದ್ದೆ. ಅಲ್ಲಿದ್ದ ಒಬ್ಬ ಸಾರ್ವಜನಿಕರಲ್ಲಿ ಮಾಹಿತಿ ಕೇಳಲಾಗಿ ಅವರು ಖಾತಾ ಬದಲಾವಣೆ ಮಾಡಲು ಸಂಬಂಧಿಸಿದ ದಾಖಲೆಗಳು ಬೇಕಾಗಿದ್ದು, ಅವುಗಳನ್ನು ನೆಮ್ಮದಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿ ಪಡೆಯಲು ತಿಳಿಸಿದರು. ಸಂಬಂಧಿಸಿದ ದಾಖಲೆಗಳನ್ನು ಪಡೆಯಲು ನಾನು ನೆಮ್ಮದಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿದೆನು. ಅಲ್ಲಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರನ್ನು ಭೇಟಿಯಾಗಿದ್ದು, ಸಹಿ ಮಾಡಲು ತಿಳಿಸಿದರು. ಗ್ರಾಮ ಲೆಕ್ಕಾಧಿಕಾರಿ ಎಲ್ಲಿ ಸಿಗುತ್ತಾರೆ ಅಂತಾ ಸರಿಯಾಗಿ ಮಾಹಿತಿ ಇರಲಿಲ್ಲ. ನಮ್ಮೂರಿನ ಜನ ಲಕಮಾಪುರ ರಸ್ತೆಯ ಹತ್ತಿರ ಇರುವ ಒಂದು ಕೊಠಡಿಯಲ್ಲಿ ಸಿಗಬಹುದು ಅಂತಾ ತಿಳಿಸಿದರು. ನಾನು ಸದರಿ ಸ್ಥಳದ ಹತ್ತಿರ ಹೋಗಿ ನಿಂತಾಗ, ಅಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಸಿಬ್ಬಂದಿಯವರು ತಮ್ಮ ಕಛೇರಿಗೆ ಕರೆದುಕೊಂಡು ಹೋದರು. ಎ.ಸಿ.ಬಿ. ಕಛೇರಿಯಲ್ಲಿ ಯಾರು ಯಾರು ಇದ್ದರು ಅಂತಾ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅನಾರೋಗ್ಯದ ಕಾರಣ, ಸಾಕ್ಷ್ಯ ನುಡಿಯಲು ಈ ಹಂತದಲ್ಲಿ ಅಸಮರ್ಥನಾಗಿರುತ್ತಾರೆ ಮತ್ತು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಲು ವಿನಂತಿಸಿ ಸಮಯ ಕೋರಿದ್ದರ ಮೇರೆಗೆ, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.